ಹೇಳಿಕೊಡ್ತಾರ..." ಎಂದು ದುಮುಗುಟ್ಟುತ್ತ ನನಗೆ ಪೂಜೆ ಮಾಡಿದ್ದಳು.

ಕಾಲ ಕಳೆದಂತೆ ಪಾವ್‌ಭಾಜಿಗೆ ಸ್ಪರ್ಧೆ ಹೆಚ್ಚಿತು. ವಡಾಪಾವ್, ಪಾನಿಪೂರಿ, ಸೇವ್‌ಪೂರಿ... ಮುಂತಾದ ಚಾಟ್‌ಗಳು ಅದಕ್ಕಿಂತ ಮುಂದೋಡತೊಡಗಿದ್ದವು. ಅದರಲ್ಲೇ ಸ್ವಲ್ಪ ಬದಲಾವಣೆ ಮಾಡಿ ಭಾಜಿಪಾವ್ ಕೂಡ ಮಾಡಲಾರಂಭಿಸಿದ್ದರು. ಅದೇ ಉಳಿದ ಭಾಜಿಯಲ್ಲಿ ಪಾವ್ ತುಂಡು ಮಾಡಿ ಕಲೆಸಿ ಅದನ್ನು ತವಾದ ಮೇಲೆ ಬಿಸಿ ಮಾಡಿ ಕೊಡುತ್ತಿದ್ದರು. ನನಗೆ ಅಮ್ಮ ಮತ್ತು ಅವಳ ಗೆಳತಿಯರ ನೆನಪಾಗುತ್ತಿತ್ತು. ಇಷ್ಟೆಲ್ಲ ಆದರೂ ಬಾಳುನ ಬಳಿ ಜನಸಂದಣಿಯೇನೂ ಕಡಿಮೆಯಾಗಿರಲಿಲ್ಲ. ನನ್ನ ಮದುವೆಯ ಸಮಯದಲ್ಲಿ ಪ್ಲೇಟಿಗೆ ಆರೋ... ಏಳೋ ರೂಪಾಯಿ ಇದ್ದ ನೆನಪು. ಪ್ಲೇಟು ಚಿಕ್ಕದಾಗಿ ಕೊಡುವ ಪ್ರಮಾಣವೂ ಕಡಿಮೆಯಾಗಿತ್ತು. ಬೆಂಗಳೂರಿಗೆ ಬಂದ ಮೇಲೆ ಒಳ್ಳೆಯ ಇಡ್ಲಿ, ದೋಸೆ, ಮೈಸೂರ್‌ಪಾಕ್... ಎಲ್ಲ ದೊರೆತರೂ ಪಾವ್‌ಭಾಜಿ ಸಿಗಲಿಲ್ಲ. ಒಂದೆರೆಡು ಹೋಟೆಲ್‌ಗಳಲ್ಲಿ ದೊರೆತರೂ ತುಂಬಾ ದುಬಾರಿ. ನಾನು ನಿಜವಾಗಿಯೂ ಬಾಳೂನ ಪಾವ್‌ಭಾಜಿಯನ್ನು ಮಿಸ್ ಮಾಡಿಕೊಂಡಿದ್ದೆ. ಅದನ್ನು ಒಮ್ಮೆ ಹೋದಾಗ ಅವನ ಮುಂದೆ ಹೇಳಿದ್ದೂ ಇತ್ತು. ಅವನದು ಅದೇ ಮಾಸದ ಕಿರುನಗೆ. "ಹೌದೇನ್ರಿ? ಹಂಗಾರ ಇಲ್ಲೇ ಇನ್ನೊಂದು ಪ್ಲೇಟ್ ತಿಂದ ಹೋಗ್ರಿ" ಎಂದಿದ್ದ. ಅಂದು ಬಿಲ್ ಕೂಡ ತೆಗೆದುಕೊಳ್ಳದೇ, "ಮದಿವ್ಯಾದ ಮ್ಯಾಲೆ ಮದಲೇ ಸಲಾ ಬಂದೀರಿ. ನನ್ನ ಕಡಿಂದ ಪಾರ್ಟಿ ನಿಮಗ. ಮುಂದಿನ ಸಲ ಮನಿಯಾವರನ್ನ ಕರಕೊಂಡು ಬರ್‍ರಿ" ಎಂದಿದ್ದ. ಹೇಳಲಾಗದ ಬಾಂಧವ್ಯದಿಂದ ಮನಸ್ಸು ತುಂಬಿ ಬಂದಿತ್ತು. ಪಾವ್‌ಭಾಜಿ ಮಸಾಲೆ ದೊರೆತ ಮೇಲೆ ನಾನೇ ಮಾಡಲಾರಂಭಿಸಿ ತಕ್ಕಮಟ್ಟಿಗೆ ಸಫಲಳೂ ಆಗಿದ್ದೆ. ದೆಹಲಿಯಲ್ಲಿದ್ದಾಗ... ಲಂಡನ್‌ನಲ್ಲಿದ್ದಾಗ ಅನೇಕ ಬಾರಿ ಮಾಡಿ ಅತಿಥಿಗಳಿಗೆ ಉಣಬಡಿಸಿದ್ದಿತ್ತು.

ಜಗತ್ತೇ ಬದಲಾಗುತ್ತಂತೆ... ಇನ್ನು ಅಮ್ಮ ಅಪ್ಪ ಬದಲಾಗದಿರುತ್ತಾರೆಯೆ? ತಕ್ಕ ಮಟ್ಟಿಗೆ ಬದಲಾಗಿದ್ದರು. ತವರಿಗೆ ಬೆಳಗಾವಿಗೆ ಹೋದಾಗ ತಾವೇ, "ಸಾಯಿಬಾಬಾನ ಪ್ರಸಾದಕ್ಕ ಹೋಗಿಬರ್ತೀಯೇನು? ಬೇಕಾದ್ರ ಹೋಗಿ ಬಾ. ನಮಗೆರೆಡು ಪ್ಲೇಟ್ ಪಾರ್ಸೆಲ್ ತಂದು ಬಿಡು" ಎನ್ನುತ್ತಿದ್ದುದು ಮಗಳ ಮೇಲಿನ ಮಮತೆಯನ್ನು ಸಾರುತ್ತಿತ್ತು. ಹೊಸ ದೆವ್ವಗಳಿಗಿಂತ ಹಳೆಯ ದೆವ್ವವೇ ಮೇಲೆಂದು, "ಬ್ಯಾರೇ ಚಾಟ್‌ಗೀಟ್‌ಗೊಳೆಲ್ಲಾ ಬ್ಯಾಡ. ಪಾವ್‌ಭಾಜಿನ ತೊಗೊಂಡ ಬಾ" ಎನ್ನುತ್ತಿದ್ದುದು ಅವರೂ ಅದರ ಮೇಲೆ ಪ್ರೀತಿ ಬೆಳೆಸಿಕೊಂಡಿದ್ದು ಗೊತ್ತಾಗುತ್ತಿತ್ತು. ಅಷ್ಟೇ ಅಲ್ಲ... ಬೀದಿಯಲ್ಲಿ ತಿನ್ನಬಾರದೆಂಬ ತಮ್ಮ ನಿಯಮಕ್ಕೆ ಬದ್ಧರಾಗಿ ಅಪ್ಪ ಹೋಟೆಲ್‌ಗಳನ್ನೂ ಹುಡುಕಿದ್ದರು. "ಕಲಾಮಂದಿರದ ಎದುರಿಗೆ ಶೆಟ್ಟಿ ಸ್ನ್ಯಾಕ್ಸ ಅಂತ ಹೋಟೆಲ್ ಆಗೇದ. ಊರಾಗನೂ ಕಪಿಲ ಥೇಟರ್ ಎದುರಿಗೆ ಥೊಡ್ಡದದ. ಪಾವ್‌ಭಾಜಿ, ದೋಸೆ ಎಲ್ಲಾ ಭೊಲೊ ಮಾಡ್ತಾನ. ಹೋಗಿಬರೋಣು ಬರ್‍ರಿ" ಎಂದು ಮೊಮ್ಮಗನಿಗಾಗಿ ಆಟೊದಲ್ಲಿ ಕರೆದೊಯ್ಯುತ್ತಿದ್ದರು. ನನ್ನ ಪುಟ್ಟ ಮಗ ಕೂಡ ಪಾವ್‌ಭಾಜಿಯನ್ನು ಚಪ್ಪರಿಸಿ ತಿನ್ನುವುದನ್ನು ನೋಡಿ, "ಎಲ್ಲಾ ಅವ್ವನ್ನ ಹೋತದ..." ಎಂದು ಸಣ್ಣಗೇ ಪಿಸುನುಡಿಯುತ್ತಿದ್ದರು. ಕಾಲಕ್ರಮೇಣ ಬೆಂಗಳೂರಿನಲ್ಲೂ ಬೇಕಾದಲ್ಲಿ ದೊರೆಯಲಾರಂಭಿಸಿದಾಗ ಅದರ ಬಗೆಗಿನ ಕ್ರೇಜ್ ಕಡಿಮೆಯಾಯಿತು. ಆದರೂ ಬೆಳಗಾವಿಗೆ ಹೋದಾಗಲೊಮ್ಮೆ ಪಾವ್‌ಭಾಜಿ ಸವಿಯುವುದು ಕಡ್ಡಾಯ ಕಾರ್ಯಕ್ರಮಗಳಲ್ಲಿ ಸೇರಿಕೊಂಡಿತ್ತು.

ಅವ್ಯಕ್ತವಾಗಿರುವ ನಮ್ಮ ಮನದ ಭಾವಗಳನ್ನು ಒಮ್ಮೊಮ್ಮೆ ನಮಗೇ ಅರಿಯಲಾಗುವುದಿಲ್ಲ. ಅಪ್ಪ ಹಠಾತ್ತನೆ ತೀರಿಹೋದಾಗಲೂ ಹೀಗೇ ಆಯಿತು. ನಂತರ ಬೆಳಗಾವಿಗೆ ಹೋದಾಗ ಬಾಳುನ ಬಳಿ ಹೋಗಿ ಪಾವ್‌ಭಾಜಿ ತಿನ್ನಲಾಗಲಿಲ್ಲ. ಅಪ್ಪ ಬೈಯುತ್ತಿದ್ದ ನೆನಪಾಗಿ ಕಣ್ಣು ಹಸಿಯಾಗಿ ಕಾಲುಗಳು ತಡೆಯುತ್ತಿದ್ದವು. ಎಷ್ಟೆಂದರೆ ಹಿಂದೆ ಬೈದರೂ ಕೇಳದೇ ಭಂಡತನದಿಂದ ಉತ್ತರ ಕೊಟ್ಟು ಹೋಗುತ್ತಿದ್ದವಳು ನಾನೇನಾ ಎಂದು ಸಂಶಯಿಸುವಷ್ಟು... ಸ್ನೇಹಿತೆಯರೂ ಮದುವೆಯಾಗಿ